**ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫ್‌ಸಿ ರವರ ನ್ಯಾಯಾಲಯ, ಮಳವಳ್ಳಿ.**

**ಸಿಸಿ ನಂಃ 20 /2022**

| | | | |
|---|---|---|---|
| ಹೆಸರು | ಃ | ಉಮಾಶಂಕರ್ | ಸಿ.ಡಬ್ಲ್ಯೂ 2 |
| ತಂದೆಯ ಹೆಸರು | ಃ | ನಾಗಪ್ಪ | ಪಿ.ಡಬ್ಲ್ಯೂ 2 |
| ವಯಸ್ಸು | ಃ | 56 ವರ್ಷ | |
| ಉದ್ಯೋಗ | ಃ | ಶಾಮಿಯಾನ ಸೆಂಟರ್ | |
| ವಾಸ ಸ್ಥಳ | ಃ | ಮಳವಳ್ಳಿ | |

ಸಾಕ್ಷಿಗೆ ದಿನಾಂಕಃ **21.02.2024** ರಂದು ಪ್ರಮಾಣ ವಚನ ಬೋಧಿಸಲಾಯಿತು.

**ಮುಖ್ಯ ವಿಚಾರಣೆಃ ಎ ಪಿ ಪಿ ರವರಿಂದ .**

ನಾನು ಎಸ್.ಎಸ್.ಎಲ್.ಸಿ. ವಿದ್ಯಾಭ್ಯಾಸ ಮಾಡಿದ್ದೇನೆ. ಚಾಸಾ 1 ಮತ್ತು 3 ರವರು ನನಗೆ ಗೊತ್ತು. ಈಗ ನನಗೆ ತೋರಿಸಿದ ನಿಪಿ 4 ರಲ್ಲಿರುವ ಸಹಿ ನನ್ನದೇ. ಸದರಿ ಸಹಿಯನ್ನು ನಿಪಿ 4 ಬಿ ಎಂದು ಗುರುತಿಸಲಾಯಿತು. ಸದರಿ ಸಹಿಯನ್ನು ಮಳವಳ್ಳಿ ಗ್ರಾಮಾಂತರ ಠಾಣೆಯಲ್ಲಿ ಸಹಿ ಮಾಡಿದ್ದೇನೆ. ಚಾಸಾ 1 ರವರ ಸರ ಕಳುವಾಗಿದ್ದು, ಅದನ್ನು ವಾಪಸ್ ನೀಡುವ ಸಂದರ್ಭ ನಿಪಿ 4 ಕ್ಕೆ ಸಹಿ ಮಾಡಿರುತ್ತೇನೆ. ಮದನ್ ಛತ್ರದಲ್ಲಿ ಕಳುವಾಗಿದ್ದು, ಅದು ಸಿಕ್ಕಿದೆ ಎಂದು ನನಗೆ ಠಾಣೆಯಲ್ಲಿ ಹೇಳಿರುತ್ತಾರೆ. ನಿಪಿ 4 ಕ್ಕೆ ನಾನು ಯಾವ ದಿನಾಂಕದಂದು ಸಹಿ ಮಾಡಿದ್ದೆನೆ ಎಂದು ನನಗೆ ಗೊತ್ತಿಲ್ಲ. ಸುಮಾರು ವರ್ಷಗಳ ಹಿಂದೆ ನಿಪಿ 4 ಕ್ಕೆ ಸಹಿ ಮಾಡಿದ್ದೇನೆ. ನಾನು ಸಹಿ ಮಾಡಿದ ಸಂದರ್ಭ ಚಾಸಾ 1 ಮತ್ತು 3 ರವರು ಇದ್ದರು.

2. ಈಗ ನನಗೆ ತೋರಿಸಿದ ದಾಖಲೆಯಲ್ಲಿರುವ ಸಹಿ ನನ್ನದೇ. ಸದರಿ ದಾಖಲೆಯನ್ನು ನಿಪಿ 5 ಎಂದು ಸಾಕ್ಷಿಯ ಸಹಿಯನ್ನು ನಿಪಿ 5(ಎ) ಎಂದು ಗುರುತಿಸಲಾಯಿತು. ಸದರಿ ಸಹಿಯನ್ನು ಪೊಲೀಸ್ ಠಾಣೆಯಲ್ಲಿ ಮಾಡಿರುತ್ತೇನೆ. ನಿಪಿ 2 ಫೋಟೋದಲ್ಲಿ ನಾನು ಮತ್ತು ಚಾಸಾ 1 ಹಾಗೂ ಆರೋಗ್ಯ ಇಲಾಖೆಯವರು ಇದ್ದೇವೆ

ಅವರ ಹೆಸರು ನನಗೆ ಗೊತ್ತಿಲ್ಲ. ನಿಪಿ 2 ಫೋಟೋದಲ್ಲಿ ನಾನು ಇದ್ದು, ಏನನ್ನು ಕೊಡಲಾಗಿದೆ ಎಂಧು ನಾನು ಗಮನಿಸಿಲ್ಲ.

**ಎಪಿಪಿ ಯವರ ವಿನಂತಿ ಮೇರೆಗೆ ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಿ ಪಾಟೀ ಸವಾಲಿಗೆ ಅನುಮತಿಸಲಾಯಿತು.**

**ಪಾಟೀ ಸವಾಲುಃ ಎ ಪಿ ಪಿ ರವರಿಂದ ಃ**

ನಿಪಿ 4 ರಲ್ಲಿರುವ ಸಹಿಯನ್ನು ದಿ: 04.03.2021 ರಂದು ಬೂಗತಗಳ್ಳಿ ಗ್ರಾಮದಲ್ಲಿರುವ ಮದನ್ ಮೋಹನ್ ಕಲ್ಯಾಣ ಮಂಟಪದ ಮುಂದೆ ಲಕ್ಷ್ಮಮ್ಮರವರ ಚಿನ್ನದ ಸರ ದರೋಡೆಯಾಗಿದ್ದು, ಇದೇ ಜಾಗ ಎಂದು ತೋರಿಸಿದ್ದು, ಆ ಸ್ಥಳಕ್ಕೆ ಪೊಲೀಸರು ಭೇಟಿ ನೀಡಿದ್ದರು ಎಂದರೆ ಸರಿಯಲ್ಲ. ಆಗ ಸುಮಾರು 11-20 ರಿಂದ 11-50 ರವರಿಗೆ ಸ್ಥಳ ಪರಿಶೀಲನೆ ಮಾಡಿ ಸ್ಥಳ ಮಹಜರ್ ಕ್ರಮ ಜರುಗಿಸಿರುತ್ತಾರೆ ಎಂದರೆ ಸರಿಯಲ್ಲ. ಆ ಸಂದರ್ಭ ನಾನು, ಚಾಸಾ 1, 3 ಮತ್ತು ಪೊಲೀಸರು ಹಾಜರಿದ್ದೆವು ಎಂದರೆ ಸರಿಯಲ್ಲ.

2. ನಿಪಿ 5 ಕ್ಕೆ ದಿ: 17.09.2021 ರಂದು ನ್ಯಾಯಾಲಯದ ಆದೇಶದ ಮೇರೆಗೆ ಲಕ್ಷ್ಮಮ್ಮ ಚೈನ್‌ನ್ನು ಬಿಡಿಸಿಕೊಂಡಿದ್ದು, ಆ ಸಂದರ್ಭ ನಿಪಿ 5 ನ್ನು ಬರೆಯಲಾಗಿದೆ ಎಂದರೆ ಸರಿಯಲ್ಲ. ಆ ಸಂದರ್ಭ ಚಾಸಾ 1, 7 ಮತ್ತು 8 ರವರು ಹಾಜರಿದ್ದರು ಎಂದರೆ ಸರಿಯಲ್ಲ. ನಿಪಿ 4 ಮತ್ತು 5 ರಲ್ಲಿರುವ ಎಲ್ಲಾ ವಿಚಾರಗಳ ಬಗ್ಗೆ ತಿಳಿದಿದ್ದರೂ ಸಹ ಆರೋಪಿಗಳಿಗೆ ಅನುಕೂಲ ಮಾಡಿಕೊಡಲು ಗೊತ್ತಿದ್ದೂ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**<u>ಪಾಟೀ ಸವಾಲುಃ ಆರೋಪಿ ಪರ ಃ ಶ್ರೀಮತಿ ಆರ್.ಜೆ.ಎಸ್.ವಕೀಲರು ಶ್ರೀ ಜೆ.ಕೆ. ವಕೀಲರ ಪರ:</u>**

ನಿಪಿ 4 ಮತ್ತು 5 ರಲ್ಲಿರುವ ವಿಚಾರಗಳ ಬಗ್ಗೆ ನನಗೆ ಗೊತ್ತಿಲ್ಲ. ನಿಪಿ 2 ಫೋಟೋದಲ್ಲಿ ಕಾಣುವ ಚೈನನ್ನು ನಾನು ನಿಖರವಾಗಿ ನೋಡಿಲ್ಲ. ನನಗೆ ಈ ಪ್ರಕರಣದ ಬಗ್ಗೆ ಏನೂ ಗೊತ್ತಿಲ್ಲ ಮತ್ತು ಪೊಲೀಸರು ಹೇಳಿದ ಕಾರಣ ಸಹಿ ಮಾಡಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲ.

ಸಾಕ್ಷಿಯ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಿಸಲಾಯಿತು.

ಓ ಹೇ ಕೇ ಸ ಇದೆ
ಸಹಿ/-
ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಜೆಎಂಎಫ್‌ಸಿ, ಮಳವಳ್ಳಿ.